ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016–17 ದಿನಾಂಕ: 08–02–2017

## ಪತ್ರಿಕಾ ಆಮಂತ್ರಣ

1. ಕರ್ನಾಟಕ ರಾಜ್ಯ ಗೃಹರಕ್ಷಕ ದಳ, ಪೌರರಕ್ಷಣೆ ಹಾಗೂ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ವೃತ್ತಿಪರ ಹಾಗೂ ಕ್ರೀಡಾಕೂಟ – 2016–17

ಉದ್ಘಾಟನಾ ಸಮಾರಂಭ:
ಉದ್ಘಾಟನೆ ಹಾಗೂ ಮುಖ್ಯ ಅತಿಥಿ:
ಡಾ. ಡಿ.ವಿ. ಗುರುಪ್ರಸಾದ್, ನಿವೃತ್ತ ಪೊಲೀಸ್ ಮಹಾ ನಿರ್ದೇಶಕರು

ವಿಶೇಷ ಆಹ್ವಾನಿತರು:
ಕು. ಕರುಣಾ ಜೈನ್, ಅಂತರಾಷ್ಟ್ರೀಯ ಕ್ರಿಕೆಟ್ ಕ್ರೀಡಾಪಟು

ದಿನಾಂಕ: 09–02–2017 ಗುರುವಾರ, ಸಮಯ: ಬೆಳಿಗ್ಗೆ 9.00 ಗಂಟೆಗೆ
ಸ್ಥಳ: ಆರ್.ಎ. ಮುಂಡ್ಕುರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 029

ಸೂಚನೆ: ಈ ಕಾರ್ಯಕ್ರಮಕ್ಕೆ ಪತ್ರಕರ್ತರನ್ನು ಕರೆದೊಯ್ಯಲು ವಾಹನ ವ್ಯವಸ್ಥೆ ಮಾಡಲಾಗಿದ್ದು, ವಾಹನವು ಅಂದು ಬೆಳಿಗ್ಗೆ 7.45 ಗಂಟೆಗೆ ನಂ. 17, ಭಗವಾನ್ ಮಹಾವೀರ ರಸ್ತೆಯಲ್ಲಿನ "ವಾರ್ತಾಸೌಧ" ದ ಆವರಣದಿಂದ ನಿಗದಿತ ಸ್ಥಳದತ್ತ ತೆರಳಲಿದೆ.
ಸಂಪರ್ಕ: ಬಿ.ಎಂ. ತಿರುಮಲೇಶ್,
ಮೊಬೈಲ್ ಸಂಖ್ಯೆ: 9341776119

## ಪತ್ರಿಕಾ ಪ್ರಕಟಣೆ

# ವಿಧಾನಸಭೆಯಲ್ಲಿ ಇಂದು:

## ಶಿಥಿಲಗೊಂಡಿರುವ ಓವರ್ ಹೆಡ್ ಟ್ಯಾಂಕ್ ದರಸ್ತಿ ಕಾಮಗಾರಿಗೆ ಕ್ರಮ

ಬೆಂಗಳೂರು, ಫೆಬ್ರವರಿ 8 , (ಕರ್ನಾಟಕ ವಾರ್ತೆ)

ಇಂದು ವಿಧಾನಸಭೆಯಲ್ಲಿ ನಡೆದ ಪ್ರಶ್ನೋತ್ತರ ವೇಳೆ ಸಂದರ್ಭದಲ್ಲಿ ನಿಪ್ಪಾಣಿ ಶಾಸಕರಾದ ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಗೆ ಕೇಳಿದ ಪ್ರಶ್ನೆಗೆ ಸಚಿವರು ಉತ್ತರಿಸುತ್ತಾ ಚಿಕ್ಕೋಡಿ ತಾಲ್ಲೂಕಿನ ವಿವಿಧ ಗ್ರಾಮಗಳಿಗೆ ಕುಡಿಯುವ ನೀರಿನ ಸೌಲಭ್ಯಕ್ಕಾಗಿ 83 ಓವರ್ ಹೆಡ್ ಟ್ಯಾಂಕ್‌ಗಳು ಇದ್ದು, ಇವುಗಳ ಉಸ್ತುವಾರಿ ಹಾಗೂ ದುರಸ್ತಿ ಕಾಮಗಾರಿಯನ್ನು ಆಯಾ ಗ್ರಾಮ ಪಂಚಾಯತಿಗಳಿಗೆ ವಹಿಸಲಾಗಿದೆ ಎಂದು ತಿಳಿಸಿದರು.

ಶಾಲಾ ಆವರಣದಲ್ಲಿ ದುರಸ್ತಿಯಲ್ಲಿದ್ದ ಟ್ಯಾಂಕ್‌ಗಳನ್ನು ನೆಲಸಮಗೊಳಿಸಿ 2016-17 ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ 7 ಗ್ರಾಮಗಳಲ್ಲಿ ಹೊಸ ಓವರ್ ಹೆಡ್ ಕಾಮಗಾರಿ ಕೆಲಸಗಳನ್ನು ಕೈಗೊಳ್ಳಲಾಗಿದೆ. ಶಿಥಿಲಗೊಂಡ ಓವರ್ ಹೆಡ್ ಟ್ಯಾಂಕ್‌ಗಳ ಪ್ರತಿಯೊಂದು ಭಾಗಗಳ ಬಗ್ಗೆ ಸ್ಟ್ರಕ್ಚರಲ್ ಸೆಟಬಿಲಿಟಿ ವರದಿಪಡೆಯಲು ಕ್ರಮವಹಿಸಲಾಗಿದೆ ಎಂದು ತಿಳಿಸಿದರು.

ಎಸ್‌ಎಂ;ಪಿಎಸ್‌ಐ:ಜಿಪಿಆರ್.

## ಶಿಷ್ಟಾಚಾರ ಪಾಲಿಸುವಂತೆ ಸದನದಲ್ಲಿ ಆಗ್ರಹ

ಬೆಂಗಳೂರು, ಫೆಬ್ರವರಿ 8 , (ಕರ್ನಾಟಕ ವಾರ್ತೆ)

ಕಾನೂನು ಇಲಾಖೆಯಲ್ಲಿ ಅದರಲ್ಲೂ ನ್ಯಾಯಾಧೀಶರುಗಳಿಗೆ ಅತ್ಯಂತ ದುಬಾರಿ ವಸತಿಗೃಹ ನೀಡುತ್ತಿದ್ದು, ಇದು ರಾಜ್ಯದ ಜನರ ತೆರಿಗೆ ಹಣದ್ದಾಗಿರುತ್ತದೆ. ಅಲ್ಲದೆ ತಾಲ್ಲೂಕು ಹಾಗೂ ಜಿಲ್ಲೆಗಳಲ್ಲಿ ನ್ಯಾಯಾಲಯಕ್ಕಾಗಿ ನಿರ್ಮಿಸುವ ಭವನಗಳ ನಿರ್ಮಾಣಕ್ಕೆ ಸರ್ಕಾರ ಹಣ ಕೊಡುತ್ತದೆ. ಆದರೆ ಅದರ ಉದ್ಘಾಟನೆಯ ಸಂದರ್ಭದಲ್ಲಿ ಮಾತ್ರ ಸ್ಥಳೀಯ ಶಾಸಕರು, ಸಚಿವರುಗಳನ್ನು ಕಡೆಗಣಿಸಲಾಗುತ್ತದೆ. ಈ ಬಗ್ಗೆ ಶಿಷ್ಟಾಚಾರ ಅನುಸರಿಸುವ ಕುರಿತು ಸೂಕ್ತ ಆದೇಶ ಹೊರಡಿಸಬೇಕು ಎಂದು ಸದನದಲ್ಲಿ ಸಚಿವರು ಹಾಗೂ ಶಾಸಕರುಗಳು ಆಗ್ರಹಿಸಿದರು.

ಎಸ್‌ಎಂ/ಪಿಎಸ್‌ಐ/ಜಿಪಿಆರ್

## ಇತ್ತೀಚಿನ ನೋಟು ಅಪಮೌಲ್ಯೀಕರಣದ ಕುರಿತು ಸದನದಲ್ಲಿ ಚರ್ಚೆ

ಬೆಂಗಳೂರು, ಫೆಬ್ರವರಿ 8 , (ಕರ್ನಾಟಕ ವಾರ್ತೆ)

ನೋಟು ಅಪಮೌಲ್ಯೀಕರಣದ ಬಗ್ಗೆ ಇಂದು ಸದನದಲ್ಲಿ ತೀವ್ರವಾಗಿ ಚರ್ಚೆ ನಡೆದು, ಜನಸಾಮಾನ್ಯರ, ಕೂಲಿ ಕಾರ್ಮಿಕರ, ರೈತರ, ಸಣ್ಣ ಕೈಗಾರಿಕೆಗಳ, ರಿಯಲ್ ಎಸ್ಟೇಟ್ ಗಳ ಮೇಲೆ ಅತ್ಯಂತ ದುಷ್ಪರಿಣಾಮ ಬೀರಿದ್ದು, ಜನರು ಕೂಲಿ ಸಿಗದೆ, ಕೆಲಸ ಕಳೆದುಕೊಂಡು ದೈನಂದಿನ ಬದುಕಿಗಾಗಿ ಪರಿತಪಿಸುವಂತಾಯಿತು.

ಆದರೆ ಇಂತಹ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರ ಅಗತ್ಯ ಮುಂಜಾಗೃತಾ ಕ್ರಮ ಕೈಗೊಳ್ಳಬೇಕಾಗಿತ್ತು ಎಂದು ಸಚಿವರು ಹಾಗೂ ಶಾಸಕರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು.

ಎಸ್ಎಂ:ಪಿಎಸ್ಐ:ಜಿಪಿಆರ್

## ಶೈಕ್ಷಣಿಕ ಚಟುವಟಿಕೆಗಳಿಗಾಗಿ ಗುರುಭವನ ನಿರ್ಮಾಣ

ಬೆಂಗಳೂರು, ಫೆಬ್ರವರಿ 8 , (ಕರ್ನಾಟಕ ವಾರ್ತೆ)

ಇಂದು ವಿಧಾನಸಭೆಯಲ್ಲಿ ನಡೆದ ಪ್ರಶ್ನೋತ್ತರ ವೇಳೆ ಸಂದರ್ಭದಲ್ಲಿ ಶಿವಮೊಗ್ಗ ಶಾಸಕ ಪ್ರಸನ್ನ ಕುಮಾರ್ ಕೆ.ಬಿ. ಅವರು ಗುರುಭವನ ಕುರಿತಂತೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರಿಗೆ ಕೇಳಿದ ಪ್ರಶ್ನೆಗೆ ಸಚಿವರು ಉತ್ತರಿಸುತ್ತಾ ಶಿವಮೊಗ್ಗ ಜಿಲ್ಲೆಯ ಉಪ ನಿರ್ದೇಶಕರ ಕಚೇರಿ ಆವರಣದಲ್ಲಿ ಹಳೆಯ ಚಿಕ್ಕದಾದ ಗುರುಭವನ ಕಟ್ಟಡವಿರುತ್ತದೆ. ಅಲ್ಲದೆ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಶಿವಮೊಗ್ಗ ಇಲ್ಲಿ ಶಿಕ್ಷಕರ ತರಬೇತಿ ಮತ್ತು ಶೈಕ್ಷಣಿಕ ಚಟುವಟಿಕೆ ನಡೆಸಲು ವಿಶಾಲವಾದ ಸಭಾಂಗಣ ಮತ್ತು ತರಬೇತಿ ಕೊಠಡಿಗಳಿದ್ದು, ಈ ಕಟ್ಟಡದಲ್ಲಿ ಶಿಕ್ಷಕರ ತರಬೇತಿ ಹಾಗೂ ಶೈಕ್ಷಣಿಕ ಚಟುವಟಿಕೆಗಳೂ ನಡೆಯುತ್ತಿವೆ. ಆದ್ದರಿಂದ ಈ ಭಾಗದ ಶಿಕ್ಷಕರ ತರಬೇತಿ ಮತ್ತು ಶೈಕ್ಷಣಿಕ ಚಟುವಟಿಕೆ ನಡೆಸಲು ಯಾವುದೇ ತೊಂದರೆಯಾಗಿರುವುದಿಲ್ಲ ಎಂದು ತಿಳಿಸಿದರು.

ಎಸ್ಎಂ;ಪಿಎಸ್ಐ:ಜಿಪಿಆರ್

## ಯಶವಂತಪುರ ವ್ಯಾಪ್ತಿಯಲ್ಲಿನ ಶುದ್ಧ ಕುಡಿಯುವ ನೀರಿನ ಘಟಕ ದುರಸ್ತಿಗೆ ಸೂಕ್ತಕ್ರಮ

ಬೆಂಗಳೂರು, ಫೆಬ್ರವರಿ 8 , (ಕರ್ನಾಟಕ ವಾರ್ತೆ)

ಇಂದು ವಿಧಾನಸಭೆಯಲ್ಲಿ ನಡೆದ ಪ್ರಶ್ನೋತ್ತರ ವೇಳೆ ಸಂದರ್ಭದಲ್ಲಿ ಯಶವಂತಪುರ ಶಾಸಕರಾದ ಸೋಮಶೇಖರ್ ಎಸ್.ಟಿ. ಅವರು ನಗರಾಭಿವೃದ್ಧಿ ಸಚಿವರಿಗೆ ಕೇಳಿದ ಪ್ರಶ್ನೆಗೆ ಸಚಿವರು ಉತ್ತರಿಸುತ್ತಾ ಯಶವಂತಪುರ ವಿಧಾನಸಭಾ ವ್ಯಾಪ್ತಿಯಲ್ಲಿ 8 ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಲಾಗಿದೆ. ಅವುಗಳಲ್ಲಿ ಮೂರು ಘಟಕಗಳು ಪದೇ ಪದೇ ದುರಸ್ತಿಗೆ ಬಂದಿದ್ದು, ಗುತ್ತಿಗೆದಾರರಿಗೆ ಅನೇಕ ಬಾರಿ ತಿಳುವಳಿಕೆ ಪತ್ರ ನೀಡಿದರೂ ಅಗತ್ಯ ಕ್ರಮ ಕೈಗೊಳ್ಳದಿರುವ ಹಿನ್ನೆಲೆಯಲ್ಲಿ ಬೇರೊಬ್ಬ ಗುತ್ತಿಗೆದಾರರ ಮೂಲಕ ದುರಸ್ತಿಗೆ ಅಗತ್ಯಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಸಚಿವರು ಮುಂದುವರೆದು ಗುತ್ತಿಗೆದಾರರಿಗೆ ವಿಧಿಸುವ ಕೆಲವೊಂದು ನಿಬಂಧನೆಗಳಿಂದ ನಿರ್ವಹಣೆ ಕಾರ್ಯ ವಿಫಲಗೊಂಡಿದ್ದು ಸಹಕಾರ ಸಂಘದವರ ಮೂಲಕ ಸ್ಥಾಪಿಸುತ್ತಿರುವ ನೀರು ಶುದ್ಧೀಕರಣ ಘಟಕಗಳ ನಿರ್ವಹಣೆಯನ್ನು ಸದರಿ ಸಂಸ್ಥೆಯವರು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ ಎಂದು ಅವರು ತಿಳಿಸಿದರು.

ಎಸ್‌ಎಂ:ಪಿಎಸ್‌ಐ:ಜಿಪಿಆರ್.

## ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ

ಬೆಂಗಳೂರು, ಫೆಬ್ರವರಿ 8 , (ಕರ್ನಾಟಕ ವಾರ್ತೆ)

ಇಂದು ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣಕ್ಕೆ ಶಾಸಕರಾದ ರಾಜಣ್ಣ ಅವರು ವಂದನಾ ನಿರ್ಣಯ ಮಂಡಿಸಿದರು.

ಪ್ರಶ್ನೋತ್ತರ ವೇಳೆ ಅವರು ಮಾತನಾಡಿ ಪೋಲೀಸ್ ಇಲಾಖೆಗೆ ಹೆಚ್ಚಿನ ಹಣ ನೀಡಲಾಗಿದೆ ಅವರ ವೃತ್ತಿ ಕಷ್ಟಕರವಾಗಿದ್ದು, ಪೋಲೀಸರ ಮಕ್ಕಳ ವಿದ್ಯಾಭ್ಯಾಸ ಮತ್ತಿತರ ಸೌಲಭ್ಯಗಳಿಗಾಗಿ ಹೆಚ್ಚಿನ ನೆರವುನೀಡಬೇಕು. ಆರ್ಡರ್ಲಿ ಹುದ್ದೆಯ ಸಂಖ್ಯೆಗಳನ್ನು ಕಡಿಮೆ ಮಾಡುವ ಮೂಲಕ ಆರ್ಡರ್ಲಿ ಹುದ್ದೆಯ ವ್ಯವಸ್ಥೆಯನ್ನು ಸರಿಪಡಿಸಬೇಕು. 5 ವರ್ಷ ಮೇಲ್ಪಟ್ಟು ಸೇವೆ ಸಲ್ಲಿಸಿರುವವರಿಗೆ ಎಕ್ಸಿಕ್ಯುಟಿವ್ ವರ್ಕ್ ಕೊಡಬೇಕು ಎಂದರು.

ಎಸ್‌ಎಂ;ಪಿಎಸ್‌ಐ:ಜಿಪಿಆರ್

**ವಿಧಾನ ಪರಿಷತ್ತಿನಲ್ಲಿ ಇಂದು:**

## ಪ್ರಾಥಮಿಕ ಶಾಲೆಗಳ ಕಟ್ಟಡಗಳ ಅಭಿವೃದ್ಧಿ

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಗೆ 102.45 ಲಕ್ಷ, ಶೃಂಗೇರಿ 66.50 ಲಕ್ಷ ಮತ್ತು ಕೊಪ್ಪ 14.50 ಲಕ್ಷ ರೂ.ಗಳನ್ನು ಪ್ರಾಥಮಿಕ ಪ್ರೌಢಶಾಲೆಗಳ ಕಟ್ಟಡ ನಿರ್ಮಾಣ/ದುರಸ್ತಿ/ಕಾಂಪೌಂಡ್/ಮೂಲಭೂತ ಸೌಕರ್ಯಕ್ಕಾಗಿ 2016-17 ನೇ ಸಾಲಿನಲ್ಲಿ ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ ಎಂದು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ತನ್ವೀರ್ ಸೇಠ್ ಅವರು ತಿಳಿಸಿದರು.

ವಿಧಾನ ಪರಿಷತ್ ಸದಸ್ಯೆ ಶ್ರೀಮತಿ ಮೋಟಮ್ಮ ಅವರು ರಾಜ್ಯದ ಮಲೆನಾಡಿನ ಚಿಕ್ಕಮಗಳೂರು ಜಿಲ್ಲೆಯ ಬಹಳಷ್ಟು ಶಾಲಾ ಕಟ್ಟಡಗಳು ಮಳೆಗಾಲದಲ್ಲಿ ಹಾಳಾಗುತ್ತಿದ್ದು ದುರಸ್ತಿಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ಸಚಿವರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದರು.

ರಾಜ್ಯದಲ್ಲಿ 49,000 ಶಾಲೆಗಳಿದ್ದು 2,41,000 ಕೊಠಡಿಗಳಿವೆ. ಅದರಲ್ಲಿ 36,000 ಕೊಠಡಿಗಳು ಶಿಥಿಲಗೊಂಡಿವೆ. 30,000 ಕೊಠಡಿಗಳ ಸಣ್ಣಪುಟ್ಟ ದುರಸ್ತಿ ಕಾರ್ಯಗಳಿದ್ದು 19000 ಹೊಸ ಕೊಠಡಿಗಳಿಗೆ ಬೇಡಿಕೆ ಇದೆ.

ಮುಂದಿನ ಶೈಕ್ಷಣಿಕ ಸಾಲಿನಿಂದ ಸರ್ಕಾರಿ ಶಾಲೆಗಳಲ್ಲಿ ಆ್ಯಕ್ಟಿವಿಟಿ ಪುಸ್ತಕವನ್ನು ಜಾರಿಗೊಳಿಸಲು ಸರ್ಕಾರ ನಿರ್ಧರಿಸಿದೆ ಎಂದು ತಿಳಿಸಿದರು.

# ಫೆಬ್ರವರಿ 20 ರಂದು ಗೆಜೆಟೆಡ್ ಪ್ರೋಬೆಷನರ್ಸ್ ಹುದ್ದೆಗಳ ನೇಮಕಾತಿಗೆ ವ್ಯಕ್ತಿತ್ವ ಪರೀಕ್ಷೆ

ಬೆಂಗಳೂರು, ಫೆಬ್ರವರಿ 8 , (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು 2014 ಸಾಲಿನ 464 ಗೆಜೆಟೆಡ್ ಪ್ರೋಬೆಷನರ್ಸ್ ಹುದ್ದೆಗಳ ನೇಮಕಾತಿಗೆ ವ್ಯಕ್ತಿತ್ವ ಪರೀಕ್ಷೆಯನ್ನು ಇದೇ ಫೆಬ್ರವರಿ 20 ರಂದು ನಡೆಸಲು ನಿಗಧಿಪಡಿಸಿದೆ.

ವ್ಯಕ್ತಿತ್ವ ಪರೀಕ್ಷೆಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಈಗಾಗಲೇ ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ವ್ಯಕ್ತಿತ್ವ ಪರೀಕ್ಷೆಯ ಸೂಚನಾ ಪತ್ರವನ್ನು ನೋಂದಣಿ ಸಂಖ್ಯೆವಾರು ಏರಿಕೆ ಕ್ರಮದಲ್ಲಿ **(Ascending order of the Register Numbers)** ಅಭ್ಯರ್ಥಿಗಳಿಗೆ ತಂಡವಾರು ರವಾನಿಸಲಾಗುತ್ತಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

# ಉರ್ದು ಡಿಪ್ಲೋಮ ಕೋರ್ಸ್‌ಗೆ ಅರ್ಜಿ ಆಹ್ವಾನ

**ಬೆಂಗಳೂರು, ಫೆಬ್ರವರಿ 8, (ಕರ್ನಾಟಕ ವಾರ್ತೆ)**

**ಕರ್ನಾಟಕ ಉರ್ದು ಅಕಾಡೆಮಿ ಹಾಗೂ ಕೇಂದ್ರ ಮಾನವ ಸಂಪನ್ಮೂಲ ಇಲಾಖೆಯ ನ್ಯಾಷನಲ್ ಕೌನ್ಸಿಲ್ ಫಾರ್ ಪ್ರೊಮೊಷನ್ ಆಫ್ ಉರ್ದು ಲಾಂಗ್ವೇಜ್, ನವದೆಹಲಿ ಇವರ ಸಹಯೋಗದಲ್ಲಿ ಉರ್ದು ಕಲಿಯಲು ಇಚ್ಚಿಸುವ ಅಭ್ಯರ್ಥಿಗಳಿಗೆ 2017–18 ನೇ ಸಾಲಿನ ಒಂದು ವರ್ಷದ ಉರ್ದು ಡಿಪ್ಲೋಮ ಕೋರ್ಸ್‌ಗಾಗಿ ಅರ್ಜಿಯನ್ನು ಆಹ್ವಾನಿಸಿದೆ.**

**ಅಭ್ಯರ್ಥಿಗಳು ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಹಾಗೂ ಶುಲ್ಕ ರೂ 200/–ಗಳನ್ನು ನೀಡಿ ಅರ್ಜಿ ಕರ್ನಾಟಕ ಉರ್ದು ಅಕಾಡೆಮಿಯಿಂದ ಪಡೆಯಬಹುದಾಗಿದೆ. ಭರ್ತಿಮಾಡಿದ ಅರ್ಜಿಯನ್ನು ಕರ್ನಾಟಕ ಉರ್ದು ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು– ಕಳುಹಿಸಿಕೊಡಬೇಕು.**

**ಈ ಶುಲ್ಕವು ಪ್ರವೇಶ ಶುಲ್ಕ, ಅಧ್ಯಯನ, ಪಠ್ಯ ಪುಸ್ತಕಗಳು ಹಾಗೂ ಪರೀಕ್ಷೆ ಶುಲ್ಕ ಸಹ ಒಳಗೊಂಡಿರುತ್ತದೆ. ಅರ್ಜಿಯನ್ನು ಸ್ವೀಕರಿಸಲು ಫೆಬ್ರವರಿ 28 ಕೊನೆಯ ದಿನಾಂಕವಾಗಿರುತ್ತದೆ.**

**ಈ ತರಬೇತಿಗೆ ಕನಿಷ್ಠ ವಿದ್ಯಾರ್ಹತೆ ಇರುವುದಿಲ್ಲ. ಅರ್ಜಿ ಹಾಗೂ ಇತರೆ ವಿವರಗಳಿಗೆ ಉರ್ದು ಅಕಾಡೆಮಿ ಗ್ರಂಥಾಲಯ, ಚಾಲುಕ್ಯ ವಿಭಾಗ, ಕನ್ನಡ ಭವನ (ರವೀಂದ್ರ ಕಲಾಕ್ಷೇತ್ರ ಹಿಂಭಾಗ) ಜೆ.ಸಿ. ರಸ್ತೆ, ಬೆಂಗಳೂರು ಈ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.**

**ಹೆಚ್ಚಿನ ಮಾಹಿತಿಗಾಗಿ ಸೈಯದ್ ನಿಜಾಮುದ್ದೀನ್ ದೂ. 22213167/ಮೊ. 8095482660 ನಿಶಾದ್ ಬಾನು ಮೊ. ಸಂಖ್ಯೆ 9886259438 ಮೂಲಕ ಸಂಪರ್ಕಿಸಬಹುದಾಗಿದೆ.**

**ಎಸ್‌ಎಂ:ಜೆಡಿ:ಜಿಪಿಆರ್.**

# One Year Diploma Course in Urdu 2017-18

**Bengaluru, February 8 (Karnataka Information)**

**Application for admission to one year Diploma Coursein Urdu for the Non-Urdu candidates are invited by the Karnataka Urdu Academy. The course in being conducted by the Academy in co-ordination with the National Council for Promotion of Urdu Language, (Ministry of Human Resource Development, Government of India, New Delhi), for the year 2017-18/ No age limit or basic qualification is required.**

Interested candidates are admitted on payment of Rs.20/- cash which includes admission fee, course fee, study material and examination fee, application along with 2 passport size photographers may be submitted at Academy's library situated at Ground. Floor, Chalukya Block, Kannada Bhavan, next to Ravindra Kalakshetra, J.C. Road, Bengaluru – 560 002, during office hours on all working days. The last date for receipt of filled in application is 28-02-2017.

For further details Contact Mr. Syed Nizamuddin on 080-22213167 Mob, 8095482660 Smt. Nishad Banu, Librarian, Mob: 9886259438.

sm/jd/gpr

## ಗಣಕಯಂತ್ರ ಶಿಕ್ಷಣ ಪರೀಕ್ಷೆ ಫಲಿತಾಂಶ ಪ್ರಕಟ

ಬೆಂಗಳೂರು, ಫೆಬ್ರವರಿ 8 , (ಕರ್ನಾಟಕ ವಾರ್ತೆ)

ಕರ್ನಾಟಕ ಪ್ರೌಢ ಪರೀಕ್ಷಾ ಮಂಡಳಿ 2016 ರ ಡಿಸೆಂಬರ್‌ನಲ್ಲಿ ನಡೆಸಿದ್ದ ಗಣಕಯಂತ್ರ ಶಿಕ್ಷಣ ಪರೀಕ್ಷೆಯ ಫಲಿತಾಂಶವನ್ನು ಮಂಡಳಿಯ ವೆಬ್‌ಸೈಟ್ www.kseeb.kar.nic.in ನಲ್ಲಿ ಪ್ರಕಟಿಸಿದೆ.

ಫಲಿತಾಂಶವನ್ನು ಸಂಬಂಧಿಸಿದ ಶಾಲೆಗಳಿಗೆ ಕಳುಹಿಸಲಾಗಿದ್ದು, ಆಯಾ ಗಣಕಯಂತ್ರ ಶಿಕ್ಷಣ ಸಂಸ್ಥೆಗಳ ಪ್ರಕಟಣಾ ಫಲಕದಲ್ಲಿ ಪ್ರಕಟಿಸುವಂತೆ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## ವೃತ್ತಿ ನಿರೂಪಣಾ ಕೌಶಲ್ಯ ತರಬೇತಿ ಅಂತಿಮ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ಫೆಬ್ರವರಿ 8, (ಕರ್ನಾಟಕ ವಾರ್ತೆ)

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪತ್ರಿಕೋದ್ಯಮ ಪದವೀಧರ/ಸ್ನಾತಕೋತ್ತರ ಪದವೀಧರ/ಸ್ನಾತಕೋತ್ತರ

ಡಿಪ್ಲೊಮಾ ಪಡೆದ ಅಭ್ಯರ್ಥಿಗಳಿಗೆ ವೃತ್ತಿ ನಿರೂಪಣಾ ಕೌಶಲ್ಯ ತರಬೇತಿ ಶಿಬಿರಕ್ಕೆ ಆಯ್ಕೆಯಾಗಿರುವ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಇಲಾಖೆ ವೆಬ್‌ಸೈಟ್ **www.karnatakainformation.gov.in** ನಲ್ಲಿ ಪ್ರಕಟಿಸಿದೆ.

ತರಬೇತಿಯು ದಿನಾಂಕ 13-2-2017 ರಿಂದ 19-2-2017 ರವರೆಗೆ ಆಯೋಜಿಸಲಾಗಿದ್ದು. ಆಯ್ಕೆಯಾದ ಅಭ್ಯರ್ಥಿಗಳು ದಿನಾಂಕ 13-2-2017 ರ ಸೋಮವಾರ ಬೆಳಿಗ್ಗೆ 9-00 ಗಂಟೆಗೆ ಸಹಕಾರ ಪ್ರಾದೇಶಿಕ ಆಡಳಿತ ನಿರ್ವಹಣಾ ಸಂಸ್ಥೆ, ನಂ. 67, ಬನಶಂಕರಿ ಎರಡನೇ ಹಂತ, ಪದ್ಮನಾಭನಗರ, ಬೆಂಗಳೂರು -560 070 ಇಲ್ಲಿ ಹಾಜರಿರಬೇಕು.

ಅಭ್ಯರ್ಥಿಗಳು ತರಬೇತಿಗೆ ಸ್ವಂತ ಖರ್ಚಿನಲ್ಲಿ ಹಾಜರಾಗಬೇಕು. ಊಟ, ವಸತಿ ಸೌಲಭ್ಯವನ್ನು ಇಲಾಖೆ ವತಿಯಿಂದ ನೀಡಲಾಗುವುದು.

ಅಭ್ಯರ್ಥಿಗಳ ಅಂಕಪಟ್ಟಿಗಳ ಪರಿಶೀಲನೆ ನಡೆಸಿ ಪದವಿಯ ಆರು ಸೆಮಿಸ್ಟರ್, ಸ್ನಾತಕೋತ್ತರ ಪದವಿಯ ನಾಲ್ಕು ಸೆಮಿಸ್ಟರ್ ಇತ್ಯಾದಿ ಹೀಗೆ ಒಟ್ಟಾರೆ ಭಾಷಾ ವಿಷಯಗಳು ಹಾಗೂ ಐಚ್ಛಿಕ ವಿಷಯಗಳು ಸೇರಿದಂತೆ ಎಲ್ಲಾ ಸೆಮಿಸ್ಟರ್‌ಗಳ ಒಟ್ಟಾರೆ ಅಂಕಗಳನ್ನು ಪರಿಗಣಿಸಿ ಶೇಕಡಾವಾರು ಅಂಕಗಳನ್ನು ಗಣನೆಗೆ ತೆಗೆದುಕೊಂಡು ಆಯ್ಕೆಮಾಡಲಾಗಿರುತ್ತದೆ.

ದಾಖಲಾತಿಗಳ ಪರಿಶೀಲನೆ ಸಂದರ್ಭ ಅಭ್ಯರ್ಥಿಗಳು ಸುಳ್ಳು ಮಾಹಿತಿ ನೀಡಿರುವ ಪ್ರಕರಣ ಕಂಡುಬಂದಲ್ಲಿ ಆಯ್ಕೆಯನ್ನು ರದ್ದುಪಡಿಸುವ ಅಂತಿಮ ನಿರ್ಧಾರ ಇಲಾಖೆಯ ನಿರ್ದೇಶಕರ ವಿವೇಚನೆಗೆ ಒಳಪಟ್ಟಿರುತ್ತದೆ.

ತರಬೇತಿ ಸ್ಥಳದ ವಿಳಾಸದ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080-26630584, 080-26692036, 080-26692537 ಸಂಪರ್ಕಿಸಬಹುದಾಗಿದೆ.

ತರಬೇತಿ ಕುರಿತು ಹೆಚ್ಚಿನ ಮಾಹಿತಿಗಾಗಿ 080- 22028034/ 37 ನ್ನು ಹಾಗೂ ಇ ಮೇಲ್ ವಿಳಾಸ koushalyatraining2017@gmail.com ಸಂಪರ್ಕಿಸಬಹುದಾಗಿದೆ.

## ಕೆ. ಅಭಯಚಂದ್ರ ಜೈನ್‌ಗೆ ಸಂಪುಟ ದರ್ಜೆ ಸಚಿವರ ಸ್ಥಾನ

**ಬೆಂಗಳೂರು, ಫೆಬ್ರವರಿ 8, (ಕರ್ನಾಟಕ ವಾರ್ತೆ)**

ಶ್ರೀ ಕೆ. ಅಭಯಚಂದ್ರ ಜೈನ್, ಶಾಸಕರು, ಮೂಡಬಿದರೆ ಇವರನ್ನು 2018 ನೇ ಸಾಲಿನಲ್ಲಿ ಶ್ರವಣಬೆಳಗೊಳದಲ್ಲಿ ನಡೆಯುವ ಮಹಾಮಸ್ತಕಾಭಿಷೇಕ ಮಹೋತ್ಸವದ ರಾಜ್ಯಮಟ್ಟದ ಸಮಿತಿಗೆ ಸಹ-ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಇವರಿಗೆ ಸಂಪುಟ ದರ್ಜೆಯ ಸಚಿವರ ಸ್ಥಾನಮಾನ ನೀಡಲಾಗಿದೆ.